SC:102/2024
PW:05 CW:05

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

| |
|---|
| ಹೇಳಿಕೆ ಹಾಳೆ<br>ಆರ್.ಪಿ. ಸಂಖ್ಯೆ57<br>ನಮೂನೆ ಸಂಖ್ಯೆ4<br>(ಸಿವಿಲ್) |

# 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆ: 102/2024

| | |
|---|---|
| PW | 05 |
| CW | 05 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 03.07.2026.

| | | |
|---|---|---|
| ಸಾಕ್ಷಿಯ ಹೆಸರು | : | ಮೊಹಮದ್ ರಫೀ |
| ತಂದೆಯ ಹೆಸರು | : | ಹೈದರ್ ಹೊಲಿ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸಸ್ಥಳ | : | ಬಾಗೇಪಲ್ಲಿ |

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:**

ಮೃತ ನಜೀರ್ ಅಹಮದ್ ನನ್ನ ಮಾವನಿದ್ದು ಅವರ ದೊಡ್ಡ ಮಗಳನ್ನು ನಾನು ಮದುವೆ ಆಗಿರುತ್ತೇನೆ . ಇನ್ನೊಬ್ಬ ಮೃತ ಮೆಹಬೂಬ್ ಸಾಬ್ ಇವರು ನನ್ನ ಮಾವ , ಮೃತ ನಜೀರ್ ಅಹಮದ್ ನ ತಂದೆ ಆಗಿರುತ್ತಾರೆ . ಆರೋಪಿಯು ನನ್ನ ಮಾವ ನಜೀರ್ ಅಹಮದ್ ನ ಚಿಕ್ಕಪ್ಪ ಇರುತ್ತಾರೆ . ಚಾಸಾ.1 ನನ್ನ ಬಾಮೈದನಾಗಿರುತ್ತಾರೆ . ಚಾಸಾ.2 ಆರೋಪಿಯ ಹೆಂಡತಿ ಇರುತ್ತಾರೆ. ಚಾಸಾ.3,4,6,7,8,11,12,13,15,16,20 ರಿಂದ 25 ಗೊತ್ತು , ಚಾಸಾ.9,10,14 , 17 , 18 ರಿಂದ 20 ರವರು ಗೊತ್ತಿರುವುದಿಲ್ಲ .

2. ಮೃತ ನಜೀರ್ ಅಹಮದ್ ಮತ್ತು ಅವರ ತಂದೆ ಮೃತ ಮೆಹಬೂಬ್ ಸಾಬ್ ಹಂಪಸಂದ್ರ ಗ್ರಾಮದಲ್ಲಿ ಜೊತೆಯಲ್ಲಿ ವಾಸವಿದ್ದರು . ಆರೋಪಿಯು ಮೊದಲು ಸೌದಿಗೆ ಹೋಗಿದ್ದರು ಕಳೆದ 7-8 ವರ್ಷಗಳ ಹಿಂದೆ ಅಲ್ಲಿಂದ ಬಂದು ಹಂಪಸಂದ್ರ ಗ್ರಾಮದಲ್ಲಿ ವಾಸವಾಗಿದ್ದರು . ಆರೋಪಿಯು ಸೌದಿಯಲ್ಲಿ ಇದ್ದಾಗ ಆತನ ಹೆಂಡತಿ ಮಕ್ಕಳು ಹಂಪಸಂದ್ರ ಗ್ರಾಮದಲ್ಲಿ ವಾಸವಾಗಿದ್ದರು . ಆರೋಪಿಯೇ ಅವರನ್ನು ನೋಡಿಕೊಳ್ಳುತ್ತಿದ್ದನು . ನಾನು ಬಾಗೇಪಲ್ಲಿ ವಾಸವಾಗಿರುತ್ತೇನೆ .

3. ದಿಃ24.07.2024 ರಂದು ಬೆ.5.30 ಕ್ಕೆ ಚಾಸಾ.1 ನನ್ನ ಬಾಮೈದ ನನಗೆ ಫೋನ್ ಮಾಡಿ ತನ್ನ ತಂದೆ ಮತ್ತು ತಾತನನ್ನು ಯಾರೋ ಕೊಲೆ ಮಾಡಿರುತ್ತಾರೆ ಎಂದು ನನಗೆ ಹೇಳಿರುತ್ತಾನೆ . ತಕ್ಷಣ ನಾನು ಹಂಪಸಂದ್ರ ಗ್ರಾಮಕ್ಕೆ ನಾನು ಬಂದಾಗ ಅಲ್ಲಿ ಊರಿನ ಜನರು ನಿಮ್ಮ ತಾತ ಇನ್ನೂ ಬದುಕಿದ್ದಾರೆ ಯಾಸಿನ್ ಮತ್ತು ಪೀರ್ ಅಹಮದ್ ರವರು ಅವರನ್ನು ಗುಡಿಬಂಡೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ ಎಂದು ತಿಳಿಸಿದರು . ಅಲ್ಲಿಂದ ಅವರು ಆಗುವುದಿಲ್ಲ ಎಂದು ಚಿಕ್ಕಬಳ್ಳಾಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ ಎಂದು ನನಗೆ ಫೋನ್ ಮಾಡಿ ತಿಳಿಸಿದರು . ಅಲ್ಲಿಂದ ನಾನು ಚಿಕ್ಕಬಳ್ಳಾಪುರ ಸರ್ಕಾರಿ ಆಸ್ಪತ್ರೆಗೆ ಬಂದಾಗ ಅಲ್ಲಿ ಅವರು ಆಗುವುದಿಲ್ಲ ಬೆಂಗಳೂರಿಗೆ ಕರೆದುಕೊಂಡು ಹೋಗಿ ಎಂದು ಹೇಳಿದ್ದು ತಕ್ಷಣ ನಾನು ನಮ್ಮ ತಾತ ಮೆಹಬೂಬ್ ಸಾಬ್ ನನ್ನು ಬೆಂಗಳೂರಿಗೆ ಆಂಬ್ಯುಲೆನ್ಸ್ ನಲ್ಲಿ ನಿಮಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋದೆನು . ಸದರಿ ಆಸ್ಪತ್ರೆಗೆ ದಾಖಲು ಮಾಡಿ ತೋರಿಸುತ್ತಿದ್ದಾಗ ಎಂ.ಆರ್.ಐ ಸ್ಕಾನ್ ಮಾಡಿದ್ದು ನಂತರ ಆಸ್ಪತ್ರೆಯಲ್ಲಿ ನಮ್ಮ ತಾತ ಮೃತಪಟ್ಟಿರುತ್ತಾರೆ . ಸದರಿ ಆಸ್ಪತ್ರೆಗೆ ಗುಡಿಬಂಡೆ ಪೊಲೀಸ್ ಠಾಣೆಯ ಪೊಲೀಸರು ಬಂದು ಮೃತ ತಾತನ ಶವವನ್ನು ಗುಡಿಬಂಡೆ ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಬಂದರು ಅಲ್ಲಿ ಮೃತನ ಮರಣೋತ್ತರ ಪರೀಕ್ಷೆಯನ್ನು ಮಾಡಲಾಗಿರುತ್ತದೆ . ನಂತರ ಮೃತ ನಮ್ಮ ತಾತನ ಶವವನ್ನು ಹಂಪಸಂದ್ರ ಗ್ರಾಮಕ್ಕೆ ತೆಗೆದುಕೊಂಡು ಹೋಗಿ ಧಪನ್ ಮಾಡಿರುತ್ತೇವೆ .

4. ನನ್ನ ಮಾವ ನಜೀರ್ ಅಹಮದ್ ರವರು ಸ್ಥಳದಲ್ಲಿಯೇ ಮೃತಪಟ್ಟಿದ್ದರು . ನಂತರ ನಾವು ನಮ್ಮ ತಾತನ ಶವವನ್ನು ಬೆಂಗಳೂರಿನಿಂದ ತೆಗೆದುಕೊಂಡು ಬರುವಾಗ ನಮ್ಮ

ಮಾವನ ಶವವನ್ನು ಚಿಕ್ಕಬಳ್ಳಾಪುರ ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಬಂದು ಪೋಸ್ಟ್ ಮಾಟಮ್ ಮಾಡಲಾಗಿರುತ್ತದೆ . ನಂತರ ನಮ್ಮ ಮಾವನ ಶವವನ್ನು ಸಹಾ ಹಂಪಸಂದ್ರ ಗ್ರಾಮಕ್ಕೆ ತೆಗೆದುಕೊಂಡು ಬಂದಿದ್ದು ನಮ್ಮ ಮಾವ ಮತ್ತು ತಾತನು ಇಬ್ಬರ ಶವಗಳನ್ನು ಹಂಪಸದ್ರ ಗ್ರಾಮದಲ್ಲಿ ಧಫನ್ ಮಾಡಲಾಗಿರುತ್ತದೆ .

5. ಆರೋಪಿಯು ನನ್ನ ಮಾವ ನಜೀರ್ ಅಹಮದ್ ಮತ್ತು ನಮ್ಮ ತಾತ ಮೆಹಬೂಬ್ ಸಾಬ್ ನ್ನು ಇಬ್ಬರನ್ನು ಆರೋಪಿಯು ಕೊಲೆ ಮಾಡಿರುತ್ತಾನೆ ಹಾಗೂ ಅಲ್ಲಿಂದ ಬಾಗೇಪಲ್ಲಿಗೆ ಹೋಗಿ ಅಲ್ಲಿಂದ ತನ್ನ ಹೆಂಡತಿ ಮತ್ತು ಮಕ್ಕಳನ್ನು ಸಹಾ ಕೊಲೆ ಮಾಡಲು ಹೋಗಿದ್ದು ಬಾಗೇಪಲ್ಲಿಯಲ್ಲಿ ಗುಡಿಬಂಡೆ ಪೊಲೀಸರಿಗೆ ಸಿಕ್ಕಿರುತ್ತಾನೆ ಎಂದು ಚಾಸಾ.1 ರವರು ನನಗೆ ತಿಳಿಸಿರುತ್ತಾರೆ .ದಿಃ24.07.2024 ರಂದು ಬೆ.5.30 ಗಂಟೆಗೆ ನನ್ನ ಮಾವ ನಜೀರ್ ಅಹಮದ್ ನಮಾಜ್ ಮಾಡಲು ಮಸೀದಿಗೆ ಹೋಗುತ್ತಿದ್ದಾಗ ಆರೋಪಿಯು ಒಂದು ಪಿಸ್ತೂಲ್ , ಪೆಪ್ಪರ್ ಸ್ಪ್ರೆ, ಚಿಲ್ಲಿ ಸ್ಪ್ರೆ, ಸೇವಿಂಗ್ ಬ್ಲೆಡ್ ಮತ್ತು ಒಂದು ಬಟನ್ ಚಾಕು , ಮಚ್ಚು ಇವುಗಳನ್ನು ಒಂದು ಬ್ಯಾಗ್ ನಲ್ಲಿ ಇಟ್ಟುಕೊಂಡು ಬಂದು ಮೊದಲು ಪಿಸ್ತೂಲಿನಿಂದ ನನ್ನ ಮಾವನ ಬೆನ್ನಿಗೆ ಶೂಟ್ ಮಾಡಿರುತ್ತಾನೆ ಹಾಗೂ ಇನ್ನು ಜೀವಂತ ಇರುತ್ತಾನೆ ಎಂದು ಮಚ್ಚು ತೆಗೆದುಕೊಂಡು ನಮ್ಮ ಮಾವನ ಮುಖಕ್ಕೆ ಹೊಡೆದಿರುತ್ತಾನೆ . ಆ ಸಮಯದಲ್ಲಿ ಶಬ್ದವಾಗಿರುವುದನ್ನು ಕೇಳಿ ಮನೆಯಲ್ಲಿ ಮಲಗಿದಂತಹ ನನ್ನ ತಾನು ಮೆಹಬೂಬ್ ಸಾಬ್ ರವರು ಹೊರಗಡೆ ಬಂದು ನೋಡಿದಾಗ ಆರೋಪಿಯು ಅದೇ ಮಚ್ಚನ್ನು ತೆಗೆದುಕೊಂಡು ಬಂದು ನನ್ನ ತಾತನ ತಲೆಯ ಎಡಗಡೆಯ ಭಾಗ ಕ್ಕೆ ಹೊಡೆದಿರುತ್ತಾರೆ . ಅಲ್ಲಿಂದ ಬೈಕ್ ನ್ನು ತೆಗೆದುಕೊಂಡು ತನ್ನ ಹೆಂಡತಿ ಮಕ್ಕಳನ್ನು ಸಾಯಿಸಲು ಬಾಗೇಪಲ್ಲಿಗೆ ಹೋಗಿದ್ದನು ಎಂದು ಪೊಲೀಸರು ನನಗೆ ತಿಳಿಸಿರುತ್ತಾರೆ .

6. ಆರೋಪಿಯು ತನ್ನ ಹೆಂಡತಿ ಮಕ್ಕಳೊಂದಿಗೆ ಜಗಳ ಮಾಡಿ ಅವರನ್ನು ಹೊರಗೆ ಹಾಕಿದ್ದನ್ನು ಅವರ ಹೆಂಡತಿ ಮತ್ತು ಮಕ್ಕಳು ಬಾಗೇಪಲ್ಲಿಯಲ್ಲಿ ವಾಸ ಇದ್ದರು. ಆ ಉದ್ದೇಶದಿಂದ ನನ್ನ ಮಾವ ಆರೋಪಿಯ ಹೆಂಡತಿ ಮಕ್ಕಳನ್ನು ತನ್ನಿಂದ ಬೇರೆ ಮಾಡಿರುತ್ತಾರೆ ಎಂದು ಮತ್ತು ಜಮೀನು ಸರಿಯಾಗಿ ಭಾಗ ಮಾಡಿರುವುದಿಲ್ಲ ಎಂಬ ಕಾರಣಕ್ಕಾಗಿಯೇ

ಆರೋಪಿಯು ನನ್ನ ಮಾವ ಮತ್ತು ತಾತನನ್ನು ಕೊಲೆ ಮಾಡಿರುತ್ತಾನೆ . ಈ ಎಲ್ಲಾ ವಿಚಾರವನ್ನು ಪೊಲೀಸರ ಮುಂದೆ ಹೇಳಿರುತ್ತೇನೆ .

7. ನನ್ನ ಮೃತ ತಾತ ಮೆಹಬೂಬ್ ಸಾಬ್ ಮರಣ ಹೊಂದಿದ ದಿನ ಬಿಳಿ ಜುಬ್ಬ , ಪಟಾಪಟಿ ನಿಕ್ಕರ್ , ಟರ್ಕಿ ಟವಲ್ ಹಾಕಿದ್ದನ್ನು ನಾನು ಅವುಗಳನ್ನು ನೋಡಿದರೆ ನೋಡಿದರೆ ಗುರುತಿಸುತ್ತೇನೆ . ರಕ್ತದ ಹತ್ತಿದ ಬಿಳಿ ಜುಬ್ಬವನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮುಮಾ.18 ಎಂದು ಗುರುತಿಸಿರುತ್ತದೆ . ಪಟಾಪಟಿ ನಿಕ್ಕರ್ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮುಮಾ.22 ಎಂದು ಗುರುತಿಸಿರುತ್ತದೆ .

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಂ.ವಿ ಡಿಫೆನ್ಸ್ ವಕೀಲರಿಂದಃ</u>

8. ನಾನು ಬಾಗೇಪಲ್ಲಿಯಲ್ಲಿ 8 ವರ್ಷಗಳಿಂದ ವಾಸವಾಗಿರುತ್ತೇನೆ . ನನ್ನ ಸ್ವಂತ ಊರು ಚೇಳೂರು . ನಾನು ಹಂಪಸಂದ್ರದಲ್ಲಿ ಮದುವೆ ಆಗಿರುತ್ತೇನೆ . ಬಾಗೇಪಲ್ಲಿಯಲ್ಲಿ ನಾನು ಸ್ವಂತ ಮನೆಯಲ್ಲಿ ವಾಸವಾಗಿರುತ್ತೇನೆ . ನನ್ನ ಮಾವ ಮತ್ತು ತಾತನ ಕೊಲೆ ಆಗಿರುತ್ತದೆ ಎಂಬ ವಿಷಯವು ನನಗೆ ನನ್ನ ಬಾಮೈದ ಚಾಸಾ.1 ರವರು ಹೇಳಿದ ನಂತರವೇ ಗೊತ್ತಾಗಿರುತ್ತದೆ . ನಾನು ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ . ನನಗೆ ಬೆ.5.30 ಕ್ಕೆ ಫೋನ್ ಬಂದಿದ್ದು ನಾನು 6.00 ಗಂಟೆಗೆ ಹೋಗಿದ್ದೆನು . ನನಗೆ ಫೋನ್ ಬಂದಾಗ ನಾನು ಬೆಳಿಗ್ಗೆ ಎದ್ದು ನಮಾಜ್ ಗೆ ಹೋಗಿ ಬಂದಿದ್ದೆನು . ನಮಾಜ್ 10 ರಿಂದ 15 ನಿಮಿಷಗಳವರೆಗೆ ನಡೆಯುತ್ತದೆ . ಬಾಗೇಪಲ್ಲಿಯಿಂದ ಹಂಪಸಂದ್ರ 9 ಕಿ.ಲೋ ಮೀಟರ್ ಆಗಿರುತ್ತದೆ .ನಾನು ಆ ದಿನ ಕಾರಿನಲ್ಲಿ ಬಂದೆನು . ಪೊಲೀಸರ ಮುಂದೆ ಆರೋಪಿ ಮತ್ತು ನನ್ನ ಮಾವನ ನಡುವೆ ಜಮೀನಿನ ವಿಚಾರಕ್ಕೆ ಸಂಬಂಧಿಸಿದಂತೆ ಗಲಾಟೆ ಆಗಿರುತ್ತದೆ ಎಂದು ಹೇಳಿರುವುದಿಲ್ಲ . ಆರೋಪಿ ನನ್ನ ಮಾವ ಮತ್ತು ತಾತನೊಂದಿಗೆ ಆಸ್ತಿಗಳ ವಿಚಾರಕ್ಕೆ ಸಂಬಂಧಿಸಿದಂತೆ ಭಾಗದ ವಿಚಾರವನ್ನು ನಾನು ನನ್ನ ಮಾವನಿಗೆ ಕೇಳಿ ತಿಳಿಸದುಕೊಂಡಿಲ್ಲ ಆದರೆ ನಮ್ಮ ಮಾವನೇ ಒಂದು ಬಾರಿ ನನಗೆ ಹೇಳಿದ್ದರು ಎಂದು ಸ್ವತಃ ಹೇಳುತ್ತಾರೆ .

9. ಆರೋಪಿಯು ಸೌದಿಯಲ್ಲಿ ಕೆಲಸ ಮಾಡುತ್ತಿದ್ದಾಗ ತನ್ನ ಹೆಂಡತಿ ಮಕ್ಕಳಿಗೆ ಹಣವನ್ನು ಕಳುಹಿಸುತ್ತಿರುವುದನ್ನು ನಾನು ಖುದ್ದಾಗಿ ನೋಡಿರುವುದಿಲ್ಲ. ಆಸ್ತಿಯ ವಿಚಾರಕ್ಕೆ ಸಂಬಂಧಿಸಿದಂತೆ ಆರೋಪಿ ಮತ್ತು ನನ್ನ ಮಾವನ ನಡುವೆ ಭಾಗದ ಬಗ್ಗೆ ನನಗೆ ಗೊತ್ತಿರುವುದಿಲ್ಲ . ನನ್ನ ಹೇಳಿಕೆಯಲ್ಲಿ ಮೆಹಬೂಬ್ ಸಾಬ್ ಮತ್ತು ನಜೀರ್ ಅಹಮದ್ ರವರು ಆರೋಪಿಯ ಹೆಂಡತಿಗೆ ಕಷ್ಟ ಕಾಲದಲ್ಲಿ ಸಹಕಾರ ಮಾಡುತ್ತಿದ್ದರು ಎಂದು ಹೇಳಿರುತ್ತೇನೆ . ಆರೋಪಿಯ ಹೆಂಡತಿಗೆ ಬಾಡಿಗೆ ಕಟ್ಟಲು ಹಣ ಬೇಕಾದಲ್ಲಿ ಸಹಾಯ ಮಾಡುತ್ತಿದ್ದರು. ನನ್ನ ಮಾವ ಮತ್ತು ತಾತ ಇಬ್ಬರು ಆಸ್ತಿಯ ಕುರಿತು ಯಾವತ್ತು ಜಗಳ ಮಾಡಿಕೊಂಡಿರುವುದಿಲ್ಲ . ನನ್ನ ಮೃತ ಮಾವ ಮತ್ತು ತಾತ ಇವರುಗಳ ನಡುವೆ ಆಸ್ತಿಯ ವಿಚಾರಕ್ಕೆ ಜಗಳ ಇತ್ತು ಎಂದರೆ ಸರಿಯಲ್ಲ. ಆರೋಪಿಯು ತಾನು ಸೌದಿಯಲ್ಲಿ ವಾಸವಾಗಿದ್ದು , ನನ್ನ ಮಾವ ಮತ್ತು ತಾತ ಇಬ್ಬರೇ ಜಮೀನಿಗೆ ಸಂಬಂಧಿಸಿದಂತೆ ಜಗಳವಾಡಿಕೊಂಡಿದ್ದರು ಎಂದರೆ ಸರಿಯಲ್ಲ .

10. ಆರೋಪಿಗೆ ಗೊತ್ತಿಲ್ಲದ ಹಾಗೇ ನನ್ನ ಮಾವ ನಜೀರ್ ಅಹಮದ್ ರವರು ಮತ್ತು ನನ್ನ ತಾತ ಆರೋಪಿಯ ಮಕ್ಕಳಿಗೆ ಜಮೀನುಗಳ ಖಾತೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ . ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನನ್ನ ಮಾವ ಮತ್ತು ನನ್ನ ತಾತನ ನಡುವೆ ಜಗಳವಾಗಿತ್ತು ಎಂದರೆ ಸರಿಯಲ್ಲ. ನಾನು ಮಚ್ಚು, ಪಿಸ್ತೂಲ್, ಚಾಕುವನ್ನು ನೋಡಿರುವುದಿಲ್ಲ. ನಾನು ಮೆಹಬೂಬ್ ಸಾಬ್ ರವರಿಗೆ ಆದಂತಹ ಗಾಯಗಳನ್ನು ನೋಡಿದ್ದು ಪೊಲೀಸರ ಮುಂದೆ ಹೇಳಿರುತ್ತೇನೆ. ನನ್ನ ಹೇಳಿಕೆಯಲ್ಲಿ ಪಿಸ್ತೂಲು ವ್ಯವಹಾರದಲ್ಲಿ ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಪೊಲೀಸರ ಮುಂದೆ ಹೇಳಿರುತ್ತೇನೆ. ಪಿಸ್ತೂಲು ಹಣಕಾಸಿನ ವ್ಯವಹಾರ 2 ವರೆ ಯಿಂದ 3 ಲಕ್ಷ ರೂ. ಹಣ ವ್ಯವಹಾರ ಆಗಿರುತ್ತದೆ . ಸದರಿ ಹಣಕಾಸಿನ ವ್ಯವಹಾರ ನನ್ನ ವೈಯಕ್ತಿಕವಾಗಿ ಗೊತ್ತಿರುವುದಿಲ್ಲ .

11. ನಾನು ಬಾಗೇಪಲ್ಲಿಗೆ ಹೋದಾಗ ಸ್ಥಳದಲ್ಲಿ ನನ್ನ ಮಾವ ನಜೀರ್ ಅಹಮದ್ ಇದ್ದರು . ಮೆಹಬೂಾಬ್ ಸಾಬ್ ನ್ನು ನನ್ನ ಬಾಮೈದ ಕಾರಿನಲ್ಲಿ ಯಾಸಿನ್ ಮತ್ತು ಪೀರ್

ಅಹಮದ್ ರವರು ಕರೆದುಕೊಂಡು ಹೋಗಿದ್ದು ನನಗೆ ಯಾಸಿನ್ ರವರೇ ಫೋನ್ ಮಾಡಿ ಹೇಳಿರುತ್ತಾರೆ . ಘಟನೆಯು ಬೆಳಗ್ಗೆ 5.30 ಗಂಟೆಗೆ ನನ್ನ ಮಾವ ನಮಾಜ್ ಗೆ ಹೋದಾಗ ಆಗಿರುತ್ತದೆ . ಸದರಿ ವಿಷಯವನ್ನು ನನ್ನ ಬಾಮೈದ ನನಗೆ ಹೇಳಿರುತ್ತಾನೆ . ನನ್ನ ಮಾವ ಮತ್ತು ನನ್ನ ತಾತ ಆಸ್ತಿ ವಿಚಾರಕ್ಕೆ ಸಂಬಂಧಿಸಿದಂತೆ ಅವರವರೇ ಹೊಡೆದಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ತನ್ನ ಹೆಂಡತಿ ಮಕ್ಕಳಿಗೆ ಹಣವನ್ನು ಕಳುಹಿಸುವುದು ತಡಮಾಡಿದ್ದಕ್ಕೆ ಅವರ ಹೆಂಡತಿ ಮಕ್ಕಳಿಗೆ ಅವರ ಮೇಲೆ ಕೋಪ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ . ಆರೋಪಿಯು ಸೌದಿಯಿಂದ ಬಂದ ಮೇಲೆ ಆಸ್ತಿಯಲ್ಲಿ ಭಾಗ ಕೇಳುತ್ತಾರೆ ಎಂದು ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಲಾಗಿರುತ್ತದೆ ಎಂದರೆ ಸರಿಯಲ್ಲ . ನನ್ನ ತಾತ ಮೆಹಬೂಬ್ ಸಾಬ್ ಮತ್ತು ಆರೋಪಿಯ ಹೆಂಡತಿಯ ನಡುವೆ ಅನೈತಿಕ ಸಂಬಂಧ ಇದ್ದು ಆರೋಪಿಯು ಸೌದಿಯಿಂದ ಬಂದ ನಂತರ ಅದನ್ನು ಪ್ರಶ್ನೆ ಮಾಡುತ್ತಾನೆ ಎಂಬ ಉದ್ದೇಶದಿಂದ ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಲಾಗಿರುತ್ತದೆ ಎಂದರೆ ಸರಿಯಲ್ಲ . ಆರೋಪಿಯು ಆಸ್ತಿಯಲ್ಲಿ ಭಾಗ ಕೇಳುತ್ತಾರೆ ಮತ್ತು ಆರೋಪಿಯ ಮಕ್ಕಳು ನಮ್ಮ ಬಾಮೈದನ ಜೊತೆಯಲ್ಲಿ ಇದ್ದರೇ ಆಸ್ತಿಯು ನಮಗೆ ಸಿಗುತ್ತದೆ ಎಂದು ಆರೋಪಿಯ ವಿರುದ್ಧ ನನ್ನ ಬಾಮೈದ ಸುಳ್ಳು ಪ್ರಕರಣವನ್ನು ದಾಖಲಿಸಿ ಆರೋಪಿಯನ್ನು ಜೈಲಿಗೆ ಕಳುಹಿಸಿದರೆ ಆಸ್ತಿಯಲ್ಲಿ ಆರೋಪಿಗೆ ಭಾಗ ಸಿಗುವುದಿಲ್ಲ ಎಂದು ಸುಳ್ಳು ಕೇಸು ದಾಖಲಿಸಿ ಅವರು ಹೇಳಿಕೊಟ್ಟಂತೆ ನಾನು ಆರೋಾಪಿಯ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

12. ಪೊಲೀಸರ ಮುಂದೆ ನಾನು ಮೆಹಬೂಬ್ ಸಾಬ್ ಮತ್ತು ನಜೀರ್ ಅಹಮದ್ ರವರು ಇಬ್ಬರೂ ಮತ್ತು ಅವರ ಕುಟುಂಬದೊಂದಿಗೆ ಜಗಳ ವಾಡುವುದು , ಬೈದಾಡುವುದು ಮತ್ತು ದ್ವೇಷ ಇಟ್ಟುಕೊಂಡಿದ್ದರು ಎಂದು ನಾನು ಹೇಳಿಕೆಯಲ್ಲಿ ಹೇಳಿರುವುದಿಲ್ಲ . ಆರೋಪಿಯು ಆಸ್ತಿಯ ವಿಚಾರದಲ್ಲಿ ಭಾಗ ತೆಗೆದುಕೊಳ್ಳಲು ಬರುತ್ತಾನೆ ಅದನ್ನು ತಪ್ಪಿಸುವುದಕೊಸ್ಕರ ಚಾಸಾ.1 ರವರು ಸುಳ್ಳು ಕಂಪ್ಲೆಂಟ್ ನ್ನು ಕೊಟ್ಟಿದ್ದು ಅವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಆರೋಪಿಯು ಪಿಸ್ತೂಲ್

ನಿಂದಾಗಲೀ , ಮಚ್ಚಿನಿಂದಾಗಲೀ ನನ್ನ ಮಾವ ಮತ್ತು ತಾತ ನಿಗಾಗಲೀ ಹೊಡೆದಿರುವುದಿಲ್ಲ , ಕೊಲೆ ಮಾಡಿರುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಈ ಪ್ರಕರಣದಲ್ಲಿ ನನಗೆ ಏನೂ ಗೊತ್ತಿರುವುದಿಲ್ಲ . ಚಾಸಾ.1 ರವರು ಹೇಳಿಕೊಟ್ಟಂತೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಪೆಪ್ಪರ್ ಸ್ಪ್ರೆ ಆಗಲೀ ಚಿಲ್ಲಿ ಸ್ಪ್ರೆ ಆಗಲೀ ನೋಡಿರುವುದಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಮುಮಾ.18 ಮತ್ತು 22 ರಲ್ಲಿರುವ ಜುಬ್ಬಾ ಮತ್ತು ಪಟಾಪಟಿ ನಿಕ್ಕರ್ ಮೆಹಬೂಬ್ ಸಾಬ್ ರವರಿಗೆ ಸಂಬಂಧಿಸಿದ್ದಲ್ಲ ಮತ್ತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಮುಮಾ.18 ಮತ್ತು 22 ನ್ನು ಇವುಗಳನ್ನು ನಾನು ನ್ಯಾಯಾಲಯದಲ್ಲಿಯೇ ನೋಡುತ್ತಿದ್ದು ಈ ಹಿಂದೆ ನೋಡಿರುವುದಿಲ್ಲ ಎಂದರೆ ಸರಿಯಲ್ಲ . ನಾನು ಹೇಳಿಕೆಯನ್ನು ಕೊಟ್ಟ ನಂತರ ಪೊ.ಠಾಣೆಗೆ ಹೋಗಿ ಮರುಹೇಳಿಕೆಯನ್ನು ಕೊಟ್ಟಿರುತ್ತೇನೆ . ನಾನು ಮರುಹೇಳಿಕೆಯನ್ನು ಕೊಟ್ಟಿರುವುದಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ** 03.07.2026 **ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು** )

ಓದಿ ಹೇಳಿ ಕೇಳಿ ಸರಿ ಇದೆ

Sd/-

**(ಸಿದ್ದಣ್ಣ.ಬಿ.ಹಂದ್ರಾಳ)**
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.